1972-78

ರಾಜ್ಯ ವಿಧಾನಸಭೆಯ ಮೊದಲ ಮಹಿಳಾ ಸಭಾಧ್ಯಕ್ಷರಾಗಿ ಆಯ್ಕೆಯಾದವರು ಕೆ.ಎಸ್. ನಾಗರತ್ನಮ್ಮ. ಅಧ್ಯಕ್ಷೆಯಾಗಿದ್ದು 1972-78 ರ ಅವಧಿಯಲ್ಲಿ. ಇವರನ್ನು ಹೊರತುಪಡಿಸಿ ಇದುವರೆಗೆ ಬೇರಾವ ಮಹಿಳೆ ಈ ಹುದ್ದೆಗೇರಿಲ್ಲ.



ಕೈ ನಾಯಕರಿಂದ ಟಿಕೆಟ್ ಮಾರಾಟ

ರಾಜ್ಯ ಕಾಂಗ್ರೆಸ್‌ನಲ್ಲಿ ನಾಯಕತ್ವವೇ ಇಲ್ಲ. ಒಬ್ಬೊಬ್ಬ ನಾಯಕರು ಒಂದೊಂದು ಪಟ್ಟಿ ಸಿದ್ದಪಡಿಸಿದ್ದಾರೆ. ಟಿಕೆಟ್ ನೀಡುವ ಆಮಿಷವೊಡ್ಡಿ ಹಣ ಪಡೆಯಲಾಗುತ್ತಿದೆ. ಒಂದೊಂದು ಟಿಕೆಟ್ ಕೋಟಿ ಕೋಟಿಗೆ ಮಾರಾಟ ಮಾಡಿಕೊಳ್ಳುತ್ತಿದ್ದಾರೆ

- **ಜಗದೀಶ್ ಶೆಟ್ಟರ್** | ಮುಖ್ಯಮಂತ್ರಿ

ಚುನಾವಣಾ ಮಿಡಿತ

ಉಪ ತಹಶೀಲ್ದಾರ್, ಪಿಡಿಓ ಅಮಾನತು

ರಾಯಚೂರು: ಮಾನ್ವಿ ತಾಲೂಕಿನ ಮಲ್ಲಟ್ ಗ್ರಾಮದಲ್ಲಿ ಸರ್ಕಾರಿ ಸಾಧನೆಗಳ ಜಾಹೀರಾತು ತೆರವುಗೊಳಿಸುವಲ್ಲಿ ವಿಫಲರಾದ ಉಪ ತಹಶೀಲ್ದಾರ್ ಮಾಣಿಕ್ಯಮ್ಮ ಮತ್ತು ಪಿಡಿಓ ಬಾಲನಗೌಡ ಅವರನ್ನು ಸೇವೆಯಿಂದ ಗುರುವಾರ ಅಮಾನತುಗೊಳಿಸಲಾಗಿದೆ.

ವಿಧಾನಸಭಾ ಚುಣಾವಣಾ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಸರ್ಕಾರಿ ಮತ್ತು ಖಾಸಗಿ ಜಾಹೀರಾತು ಫಲಕಗಳನ್ನು ಸಾರ್ವಜನಿಕ ಸ್ಥಳದಿಂದ ತೆರವುಗೊಳಿಸುವಂತೆ ಜಿಲ್ಲಾ ಚುಣಾವಣಾಧಿಕಾರಿಯ ಕಟ್ಟುನಿಟ್ಟಿನ ಆದೇಶವನ್ನು ಪಾಲಿಸುವಲ್ಲಿ ವಿಫಲರಾದ ಹಿನ್ನೆಲೆಯಲ್ಲಿ ಜಿಲ್ಲಾ ಚುನಾವಣಾ ಅಧಿಕಾರಿಯೂ ಆಗಿರುವ

ಜಿಲ್ಲಾಧಿಕಾರಿ ಉಜ್ವಲ್‌ಕುಮಾರ ಘೋಷ ಅವರು ಉಪ ತಹಶೀಲ್ದಾರ್ ಮತ್ತು ಪಿಡಿಓ ಅವರನ್ನು ಅಮಾನತುಗೊಳಿಸಿ ಆದೇಶ ಹೊರಡಿಸಿದ್ದಾರೆ.

ಮೇಲ್ಮನೆಗೆ ಸಜ್ಜನ ರಾಜೀನಾಮೆ

ಬ್ಯಾಡಗಿ: ವಿಧಾನ ಪರಿಷತ್ ಬಿಜೆಪಿ ಸದಸ್ಯ ಶಿವರಾಜ ಸಜ್ಜನ ಅವರು ಗುರುವಾರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಮಧ್ಯಾಹ್ನ 12 ಗಂಟೆ ಸುಮಾರಿಗೆ ವಿಧಾನ ಪರಿಷತ್ ಸಭಾಪತಿ ಡಿ.ಹೆಚ್.ಶಂಕರಮೂರ್ತಿ ಅವರಿಗೆ ರಾಜೀನಾಮೆ ಪತ್ರ ಸಲ್ಲಿದರು.

ಬಿಜೆಪಿಯಿಂದ ಆಯ್ಕೆಯಾಗಿದ್ದ ಸಜ್ಜನರು ಕೆಜೆಪಿ ಅಧ್ಯಕ್ಷ ಯಡಿಯೂರಪ್ಪನವರ ಜೊತೆ ಗುರುತಿಸಿಕೊಂಡಿದ್ದರು. ಬಿಜೆಪಿಯಿಂದ ಶಾಸಕರಾಗಿ ಆಯ್ಕೆಯಾಗಿ ಕೆಜೆಪಿ ಸೇರಲು ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದ ಸುರೇಶಗೌಡ್ರ ಪಾಟೀಲರು ತಾವು ಯಾವುದೇ ಪಕ್ಷದಿಂದ ಸ್ಪರ್ಧೆ ಮಾಡಿವುದಿಲ್ಲವೆಂಬ ಹೇಳಿಕೆ ನೀಡಿದ್ದರು. ಪಾಟೀಲರು ಸ್ಪರ್ಧಿಸುವುದಿಲ್ಲವೆಂದು ಖಚಿತವಾದ ನಂತರ ಬ್ಯಾಡಗಿ ಕ್ಷೇತ್ರದದಿಂದ ಸ್ಪರ್ಧಿಸುವಂತೆ ಯಡಿಯೂರಪ್ಪ ಹೇಳಿದ್ದರು. ಆ ಹಿನ್ನೆಲೆಯಲ್ಲಿ ಬ್ಯಾಡಗಿ ಕ್ಷೇತ್ರದಿಂದ ಸ್ಪರ್ಧೆ ಮಾಡುವ ಸಲುವಾಗಿ ಪರಿಷತ್ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ದ್ರಾಕ್ಷಿ ಹಣ್ಣಿನ ಪೆಟ್ಟಿಗೆಯಲ್ಲಿ ₹ 8 ಲಕ್ಷ ಹಣ ಸಾಗಾಟ

ಬಳ್ಳಾರಿ: ಆಂಧ್ರದ ಗಡಿಗೆ ಹೊಂದಿಕೊಂಡಂತೆ ಇರುವ ಬಳ್ಳಾರಿಯ ಚೆಳ್ಳಗುರ್ಕಿ ಗ್ರಾಮದ ಹತ್ತಿರದ ತನಿಖಾ ಠಾಣೆಯ ಬಳಿ ಗುರುವಾರ ಬೆಳಗ್ಗೆ 11ಗಂಟೆ ಸುಮಾರಿಗೆ ಇಂಡಿಕಾ ವಿಸ್ತಾ ಕಾರಿನಲ್ಲಿ ಅಕ್ರಮವಾಗಿ ಸಾಗಿಸುತ್ತಿದ್ದ 8 ಲಕ್ಷ ರೂ.ನಗದನ್ನು ಪರಮದೇವನ ಹಳ್ಳಿ ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಅನಂತರಪುರ ಜಿಲ್ಲೆಯಿಂದ ಬಳ್ಳಾರಿ ಕಡೆಗೆ ಇಂಡಿಕಾ ವಿಸ್ತಾ ಕಾರಿನ ಮೂಲಕ ಅಕ್ರಮವಾಗಿ ದ್ರಾಕ್ಷಿ ಹಣ್ಣಿನ ಪೆಟ್ಟಿಗೆಗಳಲ್ಲಿ ಹಣ ಸಾಗಿಸುತ್ತಿದ್ದರು. ಈ ಸಂಬಂದ

ಬಳ್ಳಾರಿ ಮೂಲದ ಚೇತನ್, ಹರೀಶ್, ಹೇಮಂತ್, ದೀಪಾರಾವ್ ಹಾಗೂ ಕಾರಿನ ಚಾಲಕ ರಾಜು ಅವರನ್ನು ಬಂಧಿಸಲಾಗಿದೆ.

ಜಿಲ್ಲೆಯ ಆಂಧ್ರದ ಗಡಿಗೆ ಸೇರಿದ ಅನೇಕ ಕಡೆಗಳಲ್ಲಿ ಮುಂಬರುವ ವಿಧಾನ ಸಭಾ ಚುನಾವಣೆಯ ಪ್ರಯುಕ್ತ ವಿಶೇಷ ತನಿಖಾ ಠಾಣೆಗಳನ್ನು ರಚಿಸಲಾಗಿದ್ದು, ರಾಜ್ಯದಿಂದ ಹೊರಕ್ಕೆ, ರಾಜ್ಯಕ್ಕೆ ಆಗಮಿಸುವ ವಾಹನಗಳ ಮೇಲೆ ತೀವ್ರ ನಿಗಾ ಇಡಲಾಗಿದೆ.

ಗ್ರಾಮೀಣ ಡಿವೈಎಸ್‌ಪಿ ರುದ್ರಮುನಿ, ತಹಶೀಲ್ದಾರ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಪಿ.ಡಿ. ಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾಂಗ್ರೆಸ್‌ಗೆ ಮಾಜಿ ಸಿಎಂ ಸದಾನಂದಗೌಡ, ಡಿಸಿಎಂ ಈಶ್ವರಪ್ಪ ಸವಾಲು

ಅಭಿವೃದ್ಧಿ ತೂಗಿ; ಕಡಿಮೆಯಾದ್ರೆ ಸನ್ಯಾಸ

ದಿಗಂತ ವರದಿ: ಬಾಗಲಕೋಟೆ,ಏ.4

ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಐವತ್ತು ವರ್ಷ ಆಡಳಿತ ನಡೆಸಿದೆ. ಜೆಡಿಎಸ್ ಹತ್ತು ವರ್ಷ ಅಧಿಕಾರ ನಡೆಸಿದೆ. ಆದರೆ, ಬಿಜೆಪಿ ಕೇವಲ ಐದು ವರ್ಷ ಅಧಿಕಾರದಲ್ಲಿದೆ. ಈ ಮೂರೂ ಪಕ್ಷಗಳ ಅಭಿವೃದ್ಧಿ ಕಾರ್ಯಗಳನ್ನು ಒಂದೆ ತಕ್ಕಡಿಯಲ್ಲಿ ತೂಗಿ, ಬಿಜೆಪಿ ಸರ್ಕಾರದ ಅಭಿವೃದ್ಧಿ ಕಾರ್ಯಗಳು ಕಡಿಮೆಯಾದರೆ ರಾಜಕೀಯ ಸನ್ಯಾಸ ಸ್ವೀಕರಿಸುವುದಾಗಿ ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದಗೌಡ ಸವಾಲು ಹಾಕಿದರು.

ನಗರದಲ್ಲಿ ಗುರುವಾರ ನಡೆದ ಬಿಜೆಪಿ ವಿಜಯ ಸಂಕಲ್ಪ ಯಾತ್ರೆಯ ಕಾರ್ಯಕರ್ತರ ಸಮಾವೇಶದಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಮೂರು ವರ್ಷಗಳ ಅವಧಿಯಲ್ಲಿ ಡಿನೋಟಿಫಿಕೇಶನ್ ಮತ್ತು ಭ್ರಷ್ಟಾಚಾರದಿಂದ ಪಕ್ಷಕ್ಕೆ ಹಾನಿಯಾಗಿತ್ತು. ನಂತರ 11 ತಿಂಗಳ ತಮ್ಮ ಅಧಿಕಾರವಧಿ ಹಾಗೂ ಈಗಿರುವ ಜಗದೀಶ್ ಶೆಟ್ಟರ್ ಅವರ 8 ತಿಂಗಳ ಅಧಿಕಾರವಧಿಯಲ್ಲಿ ಯಾವುದೇ ಕಪ್ಪು ಚುಕ್ಕೆ ಇಲ್ಲದ ಆಡಳಿತ ನೀಡಿದ್ದೇವೆ. ಭ್ರಷ್ಟಾಚಾರಕ್ಕೆ ಆಸ್ಪದ ನೀಡಿಲ್ಲ ಎಂದು ಸ್ಪಷ್ಟಪಡಿಸಿದರು.

ಕಾಂಗ್ರೆಸ್, ಜೆಡಿಎಸ್ ಅಧಿಕಾರವಧಿಯಲ್ಲಾದ ಅಭಿವೃದ್ಧಿ ಕಾರ್ಯಗಳು ಹಾಗೂ ಬಿಜೆಪಿ ಸರ್ಕಾರದ ಐದು ವರ್ಷಗಳ ಅವಧಿಯಲ್ಲಿ ಆದ ಅಭಿವೃದ್ಧಿ ಕಾಮಗಾರಿಗಳಿಗೆ ಬಳಸಿದ ಅನುದಾನದ ಕುರಿತು ಅಂಕಿ-ಅಂಶಗಳೊಂದಿಗೆ ತೂಗಿ. ಅರವತ್ತು ವರ್ಷದಲ್ಲಾಗದ ಅಭಿವೃದ್ಧಿಯನ್ನು ಕೇವಲ ಐದು ವರ್ಷದಲ್ಲಿ ಮಾಡಲಾಗಿದೆ. ಇದರಲ್ಲಿ ಸ್ವಲ್ಪ ಕಡಿಮೆಯಾದರೂ ನಾನು ರಾಜಕೀಯದಿಂದ ನಿವೃತ್ತಿ ಪಡೆಯುತ್ತೇನೆ ಎಂದು ಕಾಂಗ್ರೆಸ್‌ಗೆ ಸವಾಲು ಹಾಕಿದರು.

ದಾಖಲೆ ಕೊಡಲು ಈಶ್ವರಪ್ಪ ಆಗ್ರಹ

ಸಮಾವೇಶದಲ್ಲಿ ಮಾತನಾಡಿದ ಉಪ ಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ, ಕಾಂಗ್ರೆಸ್ ಪಕ್ಷ ದಲಿತರು ಮತ್ತು ಹಿಂದುಳಿದವರನ್ನು ಕೇವಲ ಓಟ್ ಬ್ಯಾಂಕ್ ಆಗಿ ಬಳಸಿಕೊಂಡಿದೆ. ಹಿಂದುಳಿದವರ ಉದ್ಧಾರಕರು ನಾವೇ ಎಂಬ ಸೋಗು ಹಾಕಿದ್ದ ಕಾಂಗ್ರೆಸ್, ಹಿಂದುಳಿದವರ, ದಲಿತರ ಅಭಿವೃದ್ಧಿಗೆ ಎಷ್ಟು ಹಣ ಕೊಟ್ಟಿದ್ದರು ಎಂಬ ದಾಖಲೆ ಕೊಡಲಿ ಎಂದು ಆಗ್ರಹಿಸಿದರು.

ಬಿಜೆಪಿ ಸರ್ಕಾರ, ದಲಿತರಿಗೆ, ಹಿಂದುಳಿದವರಿಗೆ, ಅಲ್ಪ ಸಂಖ್ಯಾತರಿಗೆ ನೀಡಿದ ಅನುದಾನದ ದಾಖಲೆ ಕೊಡುತ್ತೇವೆ. 50 ವರ್ಷದಲ್ಲಿ ನೀಡಿದ ಅನುದಾನವನ್ನು ಕೇವಲ ಐದು ವರ್ಷದಲ್ಲಿ ನಾವು ನೀಡಿದ್ದೇವೆ. ಈ ಸತ್ಯವನ್ನು ಕಾಂಗ್ರೆಸ್‌ನವರು ಒಪ್ಪಿಕೊಳ್ಳಬೇಕು. ದಲಿತರ, ಹಿಂದುಳಿದವರ ಅಭಿವೃದ್ಧಿಗೆ ಐದೇ ವರ್ಷದಲ್ಲಿ ನೀಡಿದ ಅನುದಾನ, ಕಾಂಗ್ರೆಸ್ ಸರ್ಕಾರ ಐವತ್ತು ವರ್ಷ ಬಳಿಸಿದ ಅನುದಾನಕ್ಕಿಂತಲೂ ಹೆಚ್ಚಿದೆ. ಇದರಲ್ಲಿ ಕೊಂಚ ಕಡಿಮೆ ಇದ್ದರೂ ತಾವು ರಾಜಕೀಯ ಸನ್ಯಾನಕ್ಕೆ ಸಿದ್ದ ಎಂದರು



ಸಹೋದರರಾಗಿದ್ದಾರೆ

ಯಡಿಯೂರಪ್ಪ ಸಿಎಂ ಆಗಿದ್ದಾಗ, ಕಾಂಗ್ರೆಸ್‌ನ ಸಿದ್ದರಾಮಯ್ಯ ಅವರು ನಿತ್ಯವೂ ಆರೋಪಿಸುತ್ತಿದ್ದರು. ಆದರೆ, ಇದೀಗ ಯಡಿಯೂರಪ್ಪ ಮತ್ತು ಸಿದ್ದರಾಮಯ್ಯ ಅಣ್ಣ-ತಮ್ಮಂದಿರಂತೆ ವರ್ತಿಸುತ್ತಿದ್ದಾರೆ. ಹಿಂದುಳಿದವರ, ದಲಿತರ ಕುರಿತು ಮೊಸಳೆ ಕಣ್ಣೀರು ಸುರಿಸುವುದನ್ನು ಕಾಂಗ್ರೆಸ್ ನಾಯಕರು ಬಿಡಬೇಕು ಎಂದರು.

ಸಿಎಂ ಶೆಟ್ಟರ್, ಬಿಜೆಪಿ ರಾಜ್ಯಾಧ್ಯಕ್ಷ ಪ್ರಹ್ಲಾದ ಜೋಶಿ, ಸಚಿವ ಗೋವಿಂದ ಕಾರಜೋಳ, ಬಾಗಲಕೋಟೆ ಶಾಸಕ ವೀರಣ್ಣ ಚರಂತಿಮಠ, ಹುನಗುಂದ ಶಾಸಕ ದೊಡ್ಡನಗೌಡ ಪಾಟೀಲ, ಬಾದಾಮಿ ಶಾಸಕ ಎಂ.ಕೆ.ಪಟ್ಟಣಶೆಟ್ಟಿ, ಜಮಖಂಡಿ ಶಾಸಕ ಶ್ರೀಕಾಂತ ಕುಲಕರ್ಣಿ, ತೇರದಾಳ ಶಾಸಕ ಸಿದ್ದು ಸವದಿ, ವಿಜಾಪುರ ನಗರ ಶಾಸಕ ಅಪ್ಪು ಪಟ್ಟಣಶೆಟ್ಟಿ, ಮಾಜಿ ಶಾಸಕ ರಾಜಶೇಖರ ಶೀಲವಂತ, ಸಾಂಸದ ರಮೇಶ ಜಿಗಜಿಣಗಿ, ಶಾಸಕ ಪಿ.ಸಿ.ಗದ್ದಿಗೌಡರ, ಬಿಜೆಪಿ ಜಿಲ್ಲಾ ಅಧ್ಯಕ್ಷ ಬಸಲಿಂಗಪ್ಪ ನಾವಲಗಿ, ವಿಧಾನ ಪರಿಷತ್ ಸದಸ್ಯ ಜಿ.ಎಸ್.ನ್ಯಾಮಗೌಡ, ಮಾಜಿ ಸದಸ್ಯ ಸಿ.ಆರ್.ಸೋರಗಾಂವಿ, ಜಿ.ಪಂ.ಅಧ್ಯಕ್ಷೆ ಶಾಂತವ್ವ ಭೂಷಣ್ಣನವರ, ಉಪಾಧ್ಯಕ್ಷ ಕೃಷ್ಣಾ ಓಗೆಣ್ಣನವರ, ಸಚಿವ ಮುರುಗೇಶ ನಿರಾಣಿ ಸಹೋದರ ಹನುಮಂತ ನಿರಾಣಿ ಮುಂತಾದವರು ಉಪಸ್ಥಿತರಿದ್ದರು.

ದಾಖಲೆ ಕೊಡಲಿ

ಹಿಂದುಳಿದವರ ಉದ್ಧಾರಕರು ನಾವೇ ಎಂಬ ಸೋಗು ಹಾಕಿದ್ದ ಕಾಂಗ್ರೆಸ್, ಹಿಂದುಳಿದವರ, ದಲಿತರ ಅಭಿವೃದ್ಧಿಗೆ ಎಷ್ಟು ಹಣ ಕೊಟ್ಟಿದ್ದರು ಎಂಬ ದಾಖಲೆ ಕೊಡಲಿ.

ಕೆ.ಎಸ್.ಈಶ್ವರಪ್ಪ, ಉಪ ಮುಖ್ಯಮಂತ್ರಿ

ರಾಜ್ಯದಲ್ಲೂ ಮೋದಿ ಗಾಳಿ

ದಿಗಂತ ವರದಿ: ಮೈಸೂರು,ಏ.4

ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿ ಅವರು ಮುಂದಿನ ಪ್ರಧಾನ ಮಂತ್ರಿಯಾಗಲು ರಾಜ್ಯದ ಜನತೆ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಯನ್ನು ಬೆಂಬಲಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎ.ರಾಮದಾಸ್ ತಿಳಿಸಿದರು.



ವಿಶ್ವೇಶ್ವರ ನಗರದಲ್ಲಿರುವ ಭಾರತಿ ಕಲ್ಯಾಣ ಮಂಟಪದಲ್ಲಿ ಗುರುವಾರ ನಡೆದ ಬಿಜೆಪಿಗೆ ಸೇರ್ಪಡೆ ಕಾರ್ಯಕ್ರಮದಲ್ಲಿ ಕೆಜೆಪಿ, ಕಾಂಗ್ರೆಸ್ ತೊರೆದು ಬಂದ ನೂರಾರು ಮಂದಿಯನ್ನು ಪಕ್ಷಕ್ಕೆ ಬರಮಾಡಿಕೊಂಡು ಅವರು ಮಾತನಾಡಿದರು.

ಗುಜರಾತನ್ನು ನರೇಂದ್ರ ಮೋದಿ ಅಭಿವೃದ್ಧಿಪಡಿಸಿದ್ದಾರೆ. ಇದೇ ಮಾದರಿಯಲ್ಲಿ ದೇಶದ ಅಭಿವೃದ್ಧಿಯಾಗಬೇಕೆಂದು ಜನರು ಬಯಸುತ್ತಿದ್ದಾರೆ. ದೇಶದ ಯುವಕರು ಮೋದಿಯವರ ಅಭಿವೃದ್ಧಿ ಮಂತ್ರದ ಮೋಡಿಗೆ ಹೆಚ್ಚಾಗಿ ಆಕರ್ಷಣೆಗೊಳಗಾಗಿದ್ದಾರೆ. ರಾಜ್ಯದಲ್ಲೂ ಕೂಡ ಮೋದಿಯವರ ಹವಾ ಇದೆ. ಹಾಗಾಗಿ ವಿಧಾನಸಭೆ ಚುನಾವಣೆಯಲ್ಲಿ ಯುವಕರು ಬಿಜೆಪಿಯನ್ನು ಬೆಂಬಲಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬಿಜೆಪಿ ಈಗ ಶುದ್ಧ

ಪಕ್ಷದಲ್ಲಿದ್ದ ಕೆಲ ನಾಯಕರು ನಡೆಸಿದ ಭ್ರಷ್ಟಾಚಾರ, ಕಚ್ಚಾಟಗಳು ಜನರ ಮನಸ್ಸಿಗೆ ತೀವ್ರ ನೋವುಂಟು ಮಾಡಿದೆ. ಇಂತಹ ನಾಯಕರು ಈಗ ಪಕ್ಷ ಬಿಟ್ಟು ಹೋಗಿದ್ದು, ಬಿಜೆಪಿ ಈಗ ಶುದ್ಧವಾಗಿದೆ. ಇನ್ನೊಮ್ಮೆ ಈ ರೀತಿಯ ಒಳ ಜಗಳ ಪಕ್ಷದಲ್ಲಿ ನಡೆಯುವುದಿಲ್ಲ. ಭ್ರಷ್ಟಾಚಾರ ಮುಕ್ತ ಆಡಳಿತವನ್ನು ನೀಡುತ್ತೇವೆ. ರಾಜ್ಯದ ಮತದಾರರು ನಾವು ಮಾಡಿದ ತಪ್ಪನ್ನು ಮನ್ನಿಸಿ ಮತ್ತೊಮ್ಮೆ ಆಶೀರ್ವಾದ ಮಾಡಿ ಪಕ್ಷವನ್ನು ಅಽಕಾರಕ್ಕೆ ತರಬೇಕು ಎಂದು ಮನವಿ ಮಾಡಿದರು.

ಕೆ.ಆರ್.ಕ್ಷೇತ್ರದಲ್ಲಿ ನಾನು ಮಾಡಿರುವ ಅಭಿವೃದ್ಧಿ ಕೆಲಸಗಳೇ ನನಗೆ ಈ ಚುನಾವಣೆಯಲ್ಲೂ ಶ್ರೀರಕ್ಷೆಯಾಗಲಿದೆ. ಕೆ.ಜೆ.ಪಿಯವರು ಚುನಾವಣೆಯಲ್ಲಿ ನನ್ನನ್ನು ಸೋಲಿಸುವುದನ್ನೇ ಅಜೆಂಡಾ ಮಾಡಿಕೊಂಡಿದ್ದು, ನನ್ನ ವಿರುದ್ಧ ಅಪಪ್ರಚಾರ ಮಾಡುತ್ತಿದ್ದಾರೆ. ನಾನು ಯಾವುದೇ ಅಭಿವೃದ್ಧಿ ಕೆಲಸ ಮಾಡುತ್ತಿಲ್ಲ ಎಂದು ಹೇಳಿಕೊಂಡು ತಿರುಗುತ್ತಿದ್ದಾರೆ. ಅಭಿವೃದ್ಧಿ ಕೆಲಸ ಯಾರ ಅವಽಯಲ್ಲಿ ಹೆಚ್ಚು ನಡೆದಿದೆ ಎಂಬುದರ ಬಗ್ಗೆ ಬೇಕಾದರೆ ಬಹಿರಂಗ ಚರ್ಚೆಗೆ ಬರಲಿ ಎಂದು ಸವಾಲು ಹಾಕಿದರು.

ಒಗ್ಗಟ್ಟು ಹೀಗೇ ಇರಲಿ...

ಬಾಗಲಕೋಟೆಯಲ್ಲಿ ಗುರುವಾರ ನಡೆದ ಬಿಜೆಪಿ ವಿಜಯಸಂಕಲ್ಪ ಯಾತ್ರೆಯನ್ನು ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಉದ್ಘಾಟಿಸಿದರು. ರಾಜ್ಯಾಧ್ಯಕ್ಷ ಪ್ರಹ್ಲಾದ್ ಜೋಶಿ, ಕೆ.ಎಸ್. ಈಶ್ವರಪ್ಪ, ಡಿ.ವಿ.ಸದಾನಂದಗೌಡ, ಗೋವಿಂದ ಕಾರಜೋಳ, ಜಿಗಜಿಣಗಿ ಮತ್ತಿತರರು ಹಾಜರಿದ್ದರು.

ಸಚಿವರ ತೀರ್ಮಾನದಿಂದ ಬಿಜೆಪಿಗೆ ಆನೆಬಲ | ಹಳೇ ಮೈಸೂರು ಭಾಗದಲ್ಲೂ ಸೋಮಣ್ಣ ಪ್ರಚಾರ: ಅನಂತ್

ನಿವೃತ್ತಿವರೆಗೂ ಬಿಜೆಪಿಯಲ್ಲೇ ಇರುವೆ: ಸೋಮಣ್ಣ

ದಿಗಂತ ವರದಿ, ಬೆಂಗಳೂರು, ಏ. 4

ಯಾವುದೇ ಕಾರಣಕ್ಕೂ ಬಿಜೆಪಿ ಬಿಡುವುದಿಲ್ಲ, ರಾಜಕೀಯ ನಿವೃತ್ತಿಯಾದರೆ ಇದೇ ಪಕ್ಷದಲ್ಲಿದ್ದು ಕೊಂಡೇ ನಿವೃತ್ತಿಯಾಗುತ್ತೇನೆ...

ಇದು ವಸತಿ ಸಚಿವ ವಿ. ಸೋಮಣ್ಣ ಅವರು ಪ್ರಕಟಿಸಿದ ತಮ್ಮ ದೃಢವಾದ ರಾಜಕೀಯ ನಿಲುವು.

ಈ ಮೂಲಕ ಕೆಜೆಪಿ ಸೇರುತ್ತಾರೆ ಎಂದು ಹಲವು ತಿಂಗಳಿಂದ ಎದ್ದಿದ್ದ ಎಲ್ಲಾ ಊಹಾಪೋಗಳಿಗೆ ತೆರೆ ಎಳೆದಿದ್ದಾರೆ.

ಗುರುವಾರ ತಮ್ಮ ನಿವಾಸದಲ್ಲಿ ಕಾರ್ಯಕರ್ತರು ಹಾಗೂ ಬೆಂಬಲಿಗರ ಸಭೆ ನಡೆಸಿದರು. ಅಷ್ಟೇ ಅಲ್ಲದೆ, ತಮ್ಮ ಮನೆಗೆ ಭೇಟಿ ನೀಡಿದ ಸಾಂಸದ ಅನಂತಕುಮಾರ್, ಉಪಮುಖ್ಯಮಂತ್ರಿ ಆರ್. ಅಶೋಕ ಅವರೊಂದಿಗೆ ಸೋಮಣ್ಣ ಸಮಾಲೋಚನೆ ನಡೆಸಿದರು.

ಬಿಜೆಪಿ ನನ್ನ ತಾಯಿಬೇರು

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜಕೀಯ ನಿವೃತ್ತಿ ಪಡೆಯುತ್ತೇನೆಯೇ ಹೊರತು ಯಾವುದೇ ಕಾರಣಕ್ಕೂ ಬಿಜೆಪಿ ತೊರೆಯುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಯಡಿಯೂರಪ್ಪ ಅವರ ಮೇಲಿನ ಪ್ರೀತಿಗೆ ಕಟ್ಟು ಬಿದ್ದಿದ್ದ ನಾನು ಪಕ್ಷ ಬಿಡುವ ನಿರ್ಧಾರ ಮಾಡಿದ್ದು ನಿಜ. ಆದರೆ, ಬಿಜೆಪಿ ನನ್ನ ತಾಯಿಬೇರು ಇದ್ದಂತೆ. ಇದರ ಅರಿವಾಗಿಯೇ ಯಡಿಯೂರಪ್ಪ ಅವರನ್ನೂ ಬಿಜೆಪಿಗೆ ಕರೆತರಲು ಪ್ರಯತ್ನಿಸಿದ್ದೆ. ಆದರೆ, ಅವರ ರಾಜಕೀಯ ನಿರ್ಧಾರ ಬದಲಾಗಲಿಲ್ಲ.

ಗೋವಿಂದರಾಜನಗರದಿಂದ ಸ್ಪರ್ಧೆ

ಇಂದಿಗೂ ಯಡಿಯೂಪ್ಪ ನನ್ನ ನಾಯಕ. ಹಾಗೆಂದು ತಾಯಿಬೇರಾಗಿರುವ ಬಿಜೆಪಿ ಯನ್ನು ಬಿಡುವುದಿಲ್ಲ, ಬೇಕಿದ್ದರೆ ರಾಜಕೀಯ ನಿವೃತ್ತಿ ಪಡೆಯುತ್ತೇನೆ. ಅಲ್ಲಿಯವರೆಗೂ ಬಿಜೆಪಿಯಲ್ಲೇ ಇರುತ್ತೇನೆ.

ಪಕ್ಷವನ್ನಾಗಲೀ, ಕ್ಷೇತ್ರ ವನ್ನಾಗಲೀ ಬದಲಿಸುವುದಿಲ್ಲ, ಗೋವಿಂದ ರಾಜ ನಗರ ವಿಧಾನಸಭಾ ಕ್ಷೇತ್ರ ದಿಂದಲೇ ಚುನಾವಣೆಗೆ ನಿಲ್ಲುತ್ತೇನೆ. ಜನರ ಆಶೀರ್ವಾದ ನನ್ನ ಮೇಲಿದೆ. ಅಷ್ಟು ಸಾಕು ನನಗೆ ಎಂದರು.

ಜನರ ಆಶೀರ್ವಾದದ ಜತೆಗೆ ಸಿದ್ದಗಂಗಾ ಮಠದ ಡಾ.ಶ್ರೀಶಿವಕುಮಾರ ಸ್ವಾಮೀಜಿ ಅವರ ಆಶೀರ್ವಾದವೂ ಇದೆ. ಅವರ ಮಾರ್ಗದರ್ಶನದಲ್ಲಿಯೇ ಜನಪರ ಕೆಲಸ ಮಾಡುವುದಾಗಿ ಹೇಳಿದ ಅವರು, ಆದಿ ಚುಂಚನಗಿರಿ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಅವರನ್ನು ಸ್ಮರಿಸಿ ಭಾವುಕರಾದರು.

ಸಾಂಸದ ಅನಂತಕುಮಾರ್ ಮಾತ ನಾಡಿ, ಸೋಮಣ್ಣ ಅವರ ತೀರ್ಮಾನ ದಿಂದ ಬಿಜೆಪಿಗೆ ಆನೆಬಲ ಬಂದಂತಾಗಿದೆ. ಅವರು ಬಿಜೆಪಿಯ ಶಕ್ತಿ. ವಿಜಯನಗರದ ವೀರಪುತ್ರ. ರಾಜ್ಯದಲ್ಲಿ ವಸತಿರಹಿತರಿಗೆ 40 ಸಾವಿರ ಮನೆಗಳನ್ನು ನೀಡಿರುವ ಏಕೈಕ ವಸತಿ ಸಚಿವರೆಂದರೆ ಅದು ವಿ.ಸೋಮಣ್ಣ ಮಾತ್ರ. ಹೀಗಾಗಿಯೇ ಅವರೊಂದು ರೀತಿ ವಸತಿ ವೀರ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಜನಪ್ರಿಯತೆ ಇರುವೆಡೆ ಒತ್ತಡ ಇರುವುದು ಸಹಜ. ಸದ್ಯಕ್ಕೆ ಒತ್ತಡದಿಂದ ಹೊರಬಂದಿರುವ ಸೋಮಣ್ಣ ಅವರು ಬೆಂಗಳೂರಿನ ಅಭಿವೃದ್ಧಿಯ ಕಣ್ಣು. 2009 ರ ಲೋಕಸಭೆ ಚುನಾವಣೆಯ ಗೆಲುವಿನಲ್ಲಿ ಅವರ ಪಾತ್ರವೂ ಇದೆ. ಅವರು ಕೇವಲ ಬೆಂಗಳೂರಿಗಷ್ಟೇ ಸೀಮಿತರಲ್ಲ. ಈ ಬಾರಿಯ ಚುನಾವಣೆಗೆ ಹಳೆಯ ಮೈಸೂರು ಭಾಗದಲ್ಲಿ ಸೋಮಣ್ಣ ಪ್ರಚಾರ ಕಾರ್ಯಕ್ಕೆ ಕೈಜೋಡಿಸಲಿದ್ದಾರೆ ಎಂದು ತಿಳಿಸಿದರು.

- **ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದಿಂದಲೇ ಚುನಾವಣೆಗೆ ಸ್ಪರ್ಧೆ**
- **ಯಡಿಯೂರಪ್ಪ ಮೇಲಿನ ಪ್ರೀತಿಗೆ ಪಕ್ಷ ಬಿಡುವ ನಿರ್ಧಾರ ಮಾಡಿದ್ದೆ**
- **ಜನರ ಮತ್ತು ಸಿದ್ದಗಂಗಾ ಶ್ರೀಗಳ ಆಶೀರ್ವಾದವಿದೆ**
- **ಬಿಜೆಪಿ ನನ್ನ ತಾಯಿ ಬೇರು ಇದ್ದಂತೆ**
- **ಇನ್ನೆಂದೂ ಪಕ್ಷ ತೊರೆಯುವುದಿಲ್ಲ**

ದೇವರು ಒಳ್ಳೆಯದು ಮಾಡಲಿ: ಬಿಎಸ್‌ವೈ

ಸೋಮಣ್ಣ ಅವರ ನಿರ್ಧಾರದ ಬಗ್ಗೆ ಪ್ರತಿಕ್ರಿಯಿಸಿರುವ ಕೆಜೆಪಿ ಅಧ್ಯಕ್ಷ ಹಾಗೂ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಯಾರಿಗೂ ಪಕ್ಷಕ್ಕೆ ಬನ್ನಿ ಎಂದು ಕರೆದಿಲ್ಲ. ಬರುವವರಿಗೆ ಬೇಡ ಎಂದಿಗೂ ಹೇಳಿಲ್ಲ, ಸೋಮಣ್ಣ ಅವರು ಬಿಜೆಪಿಯಿಂದಲೇ ಸ್ಪರ್ಧಿಸುವುದಾಗಿ ಹೇಳಿದ್ದಾರೆ. ಅವರಿಗೆ ದೇವರು ಒಳ್ಳೆಯದು ಮಾಡಲಿ ಎಂದಷ್ಟೇ ಹೇಳಿದರು.

ಶೀಘ್ರದಲ್ಲೇ ಅಂತಿಮ ಪಟ್ಟಿ

ಈಗಾಗಲೇ 102 ವಿಧಾನಸಭಾ ಕ್ಷೇತ್ರಗಳಿಂದ ಕೆಜೆಪಿಯಿಂದ ಕಣಕ್ಕಿಳಿಯಲಿರುವ ಅಭ್ಯರ್ಥಿಗಳ ಹೆಸರು ಪ್ರಕಟಿಸಲಾಗಿದೆ. ಎಲ್ಲಾ ಪಕ್ಷಗಳಿಂತ ಮುನ್ನವೇ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡಿರುವ ಕೆಜೆಪಿ, ಕೊಡಗು ಸೇರಿದಂತೆ ಎರಡು ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಹುಡುಕಲಾಗುತ್ತಿದೆ. ಉಳಿದೆಲ್ಲಾ ಕ್ಷೇತ್ರಗಳ ಅಭ್ಯರ್ಥಿಗಳ ಪಟ್ಟಿ ಅಂತಿಮಗೊಂಡಿದ್ದು ಶೀಘ್ರದಲ್ಲೇ ಅಂತಿಮ ಪಟ್ಟಿ ಬಿಡುಗಡೆ ಮಾಡಲಾಗುವುದು ಎಂದು ಇದೇ ವೇಳೆ ಯಡಿಯೂರಪ್ಪ ತಿಳಿಸಿದರು.

ಅತಿ ಶ್ರೀಮಂತರ ಪಟ್ಟಿಯಲ್ಲಿ ಪ್ರಿಯಾಕೃಷ್ಣ, ಆನಂದ್‌ಸಿಂಗ್, ವಿ.ಸೋಮಣ್ಣ, ಆನಂದ್ ಆಸ್ನೋಟಿಕರ್

ದಕ್ಷಿಣ ಭಾರತದಲ್ಲಿ ಕರ್ನಾಟಕದ ಶಾಸಕರೇ ಕುಬೇರರು

ದಿಗಂತ ವರದಿ: ಬೆಂಗಳೂರು, ಏ.4

ದಕ್ಷಿಣ ಭಾರತದ ಎಲ್ಲಾ ರಾಜ್ಯಗಳಿಗಿಂತ ಕರ್ನಾಟಕದ ಶಾಸಕರೇ ಕುಬೇರರು !

ಕಳೆದ ಚುನಾವಣೆ ವೇಳೆ ನಮ್ಮ ಶಾಸಕರೇ ಸಲ್ಲಿಸಿರುವ ಆಸ್ತಿ ಪ್ರಮಾಣಪತ್ರದ ಪ್ರಕಾರ ಸರಾಸರಿ 5.98 ಕೋಟಿ ರೂ. ಆಸ್ತಿ ಹೊಂದಿದ್ದು, ಇದು ದಕ್ಷಿಣ ಭಾರತದ ಉಳಿದ ಶಾಸಕರ ಸರಾಸರಿ ಆಸ್ತಿಗಿಂತ ಅತೀ ಹೆಚ್ಚಾಗಿದೆ.

ಕರ್ನಾಟಕದ ಜನಪ್ರತಿನಿಧಿಗಳು ಸರಾಸರಿ 5.98 ಕೋಟಿ ರೂ. ಆಸ್ತಿ ಹೊಂದಿದ್ದರೆ, ತಮಿಳುನಾಡು ವಿಧಾನಸಭಾ ಸದಸ್ಯರ ಸರಾಸರಿ ಆಸ್ತಿ 3.98 ಕೋಟಿ ರೂ. ಮೌಲ್ಯದ್ದು. ಅಂತೆಯೇ ಆಂಧ್ರಪ್ರದೇಶದ ಶಾಸಕರ ಬಳಿ ಸರಾಸರಿ 3.78 ಕೋಟಿ ರೂ. ಆಸ್ತಿಯಿದ್ದು, ಕೇರಳ ಶಾಸಕರು ಸರಾಸರಿ 1.43 ಕೋಟಿ ರೂ. ಆಸ್ತಿ ಹೊಂದಿದ್ದಾರೆ.

ಪ್ರಜಾಪ್ರಭುತ್ವ ಸುಧಾರಣಾ ಸಂಘದ ಕರ್ನಾಟಕ ಚುನಾವಣಾ ಕಾವಲು ಸಮಿತಿ ಈ ಸ್ಫೋಟಕ ಮಾಹಿತಿಯನ್ನು ಹೊರಗೆಡವಿದ್ದು, ಆಸ್ತಿ ವಿವರ ಸಲ್ಲಿಸಿರುವ 24 ಸಚಿವರ ಪೈಕಿ 18 ಮಂದಿ ಕೋಟ್ಯಾಧಿಪತಿಗಳಿದ್ದಾರೆ. ಅಂತೆಯೇ 215 ಶಾಸಕರ ಪೈಕಿ 131 ಶಾಸಕರು ಕೋಟ್ಯಾಧೀಶರು.

ಕೈ ಶಾಸಕರದ್ದೇ ಮೇಲುಗೈ

ಈ ಕೋಟ್ಯಾಧೀಶ ಶಾಸಕರಲ್ಲಿ ಮಧ್ಯೆ ಕಾಂಗ್ರೆಸಿಗರದ್ದೇ ಸಿಂಹಪಾಲು. ಕೈ ಪಾಳಯದ 70 ಶಾಸಕರ ಸರಾಸರಿ ಆಸ್ತಿ 9.55 ಕೋಟಿ ರೂಪಾಯಿ ಮೌಲ್ಯದ್ದಾಗಿದೆ. ಈ 70 ಶಾಸಕರ ಪೈಕಿ ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ಪ್ರಿಯಕೃಷ್ಣ ಅವರು ಸಲ್ಲಿರುವ ಆಸ್ತಿ ವಿವರ ಸತ್ಯಕ್ಕೆ ದೂರವಾಗಿರುವುದರಿಂದ ಪರಿಗಣನೆಗೆ ತೆಗೆದುಕೊಂಡಿಲ್ಲ. ಇನ್ನು ಎರಡನೇ ಸ್ಥಾನದಲ್ಲಿರುವ 26 ಜೆಡಿಎಸ್ ಶಾಸಕರು 4.43 ಕೋಟಿ ರೂ. ಸರಾಸರಿ ಆಸ್ತಿ ಹೊಂದಿದ್ದಾರೆ. ಬಿಜೆಪಿಯ 112 ಶಾಸಕರು ಮೂರನೇ ಸ್ಥಾನದಲ್ಲಿದ್ದು, ಸರಾಸರಿ 1.29 ಕೋಟಿ ರೂ. ಆಸ್ತಿ ಹೊಂದಿದ್ದಾರೆ ಎಂಬುದನ್ನು ಸಮಿತಿ ಬೆಳಕಿಗೆ ತಂದಿದೆ.

ಪ್ರಿಯಾಕೃಷ್ಣ

ಆನಂದ್‌ಸಿಂಗ್

ಆನಂದ್ ಕಿಂಗ್

ಇವರಲ್ಲಿ ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್ ಅವರೊಬ್ಬರ ಆಸ್ತಿಯೇ ಬರೋಬ್ಬರಿ 88.66 ಕೋಟಿ ರೂಪಾಯಿ. ನಂತರ 2010 ರಲ್ಲಿ ವಿಧಾನಪರಿಷತ್‌ನಿಂದ ವಸತಿ ಖಾತೆ ಪಡೆದ ವಿ.ಸೋಮಣ್ಣ ಅವರು 10.99 ಕೋಟಿ ರೂ. ಆಸ್ತಿ ಹೊಂದುವ ಮೂಲಕ ಎರಡನೇ ಸ್ಥಾನದಲ್ಲಿದ್ದಾರೆ. ಇನ್ನು ಮೂರನೇ ಸ್ಥಾನದಲ್ಲಿರುವ ಆನಂದ್ ಆಸ್ನೋಟಿಕರ್ 10.39 ಕೋಟಿ ರೂ. ಆಸ್ತಿ ಹೊಂದಿದ್ದಾರೆ. 2004 ರಿಂದ 2008 ರ ಅವಧಿಯಲ್ಲಿ ಪ್ರತಿ ಸಚಿವರ ಸರಾಸರಿ ಆಸ್ತಿ ಶೇ.665 ರಷ್ಟು ಹೆಚ್ಚಾಗಿದೆ ಎಂಬುದು ಗಮನಾರ್ಹ ಸಂಗತಿ.

ಆರೋಪಿಗಳೂ ಇದ್ದಾರೆ

ಇನ್ನು ರಾಜ್ಯದ ಶಾಸಕರು, ಸಚಿವರು ಕೇವಲ ಅಧಿಕ ಆಸ್ತಿವಂತರಷ್ಟೇ ಅಲ್ಲದೆ, ಅತಿ ಹೆಚ್ಚು ಆರೋಪ ಹೊತ್ತವರೂ ಆಗಿದ್ದಾರೆ. ಸಂಪುಟದ ಶೇ.42 ಮಂತ್ರಿವರ್ಯರ ಮೇಲೆ ವಿವಿಧ ಠಾಣೆಯಲ್ಲಿ ಅಪರಾಧ ಪ್ರಕರಣಗಳು ದಾಖಲಾಗಿವೆ. ಈ ಪೈಕಿ ಅರಬಾವಿ ಕ್ಷೇತ್ರದ ಶಾಸಕರೂ ಆದ ಪೌರಾಡಳಿತ ಸಚಿವ ಬಾಲಚಂದ್ರ ಜಾರಕಿಹೊಳಿ ವಿರುದ್ಧ ಕೊಲೆ, ಕೊಲೆ ಯತ್ನ, ಅಪಹರಣ, ಕಳ್ಳತನ ಪ್ರಕರಣಗಳಿವೆ ಎಂಬುದನ್ನು ಸಮಿತಿ ತನ್ನ ವರದಿಯಲ್ಲಿ ಎತ್ತಿ ಹಿಡಿದಿದೆ.

ಆಸ್ನೋಟಿಕರ್

ಈ ಬಗ್ಗೆ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ವಿವರಣೆ ನೀಡಿದ ಸಮಿತಿಯ ಪ್ರೊ.ತ್ರಿಲೋಚನ ಶಾಸ್ತ್ರಿ, ಆಸ್ತಿ ವಿವರ ಸಲ್ಲಿಸಿರುವ 214 ಶಾಸಕರ ಪೈಕಿ ವರ್ತೂರು ಪ್ರಕಾಶ್ ಅವರ ಆಸ್ತಿ ಕಡಿಮೆ ಮೌಲ್ಯದ್ದಾಗಿದ್ದು, 2 ಲಕ್ಷ ಮೌಲ್ಯದ ಆಸ್ತಿ ಹೊಂದಿರುವ ಪ್ರಕಾಶ್ ಅವರು ಕಡೆಯ ಸ್ಥಾನದಲ್ಲಿದ್ದಾರೆ ಎಂದು ತಿಳಿಸಿದರು.

₹33.47 ಲಕ್ಷ ಜಪ್ತಿ

ದಿಗಂತ ವರದಿ: ಬಳ್ಳಾರಿ,ಏ.4

ನಗರದ ಡಿಸಿಐಬಿ ಹಾಗೂ ಬ್ರೂಸ್ ಪೇಟೆ ಠಾಣೆಯ ಪೊಲೀಸರ ಕ್ಷಿಪ್ರ ಕಾರ್ಯಾಚರಣೆಯಲ್ಲಿ ಬುಧವಾರ ಮಧ್ಯರಾತ್ರಿ 33.47 ಲಕ್ಷ ರೂ. ವಶಪಡಿಸಿಕೊಂಡು ಅಶೋಕ್ ಕುಮಾರ್ ಎಂಬ ವ್ಯಕ್ತಿಯನ್ನು ಪೊಲೀಸರು ವಶಕ್ಕೆ ತೆಗೆದುಕೊಂಡು ವಿಚಾರಣೆ ನಡೆಸುತ್ತಿದ್ದಾರೆ. ನಗರದ ಮೋತಿ ವೃತ್ತದ ಬಳಿ ಹೋಂಡಾ ಆಕ್ಟಿವಾ ದ್ವಿಚಕ್ರ ವಾಹನದಲ್ಲಿ ಸಾಗಿಸುತ್ತಿದ್ದ ಹಣವನ್ನು ಪೊಲೀಸರು ಖಚಿತ ಮಹಿತಿಯ ಮೇರೆಗೆ ಕಾರ್ಯಾಚರಣೆ ನಡೆಸಿ ವಶಪಡಿಸಿಕೊಂಡಿದ್ದಾರೆ.

ಚುನಾವಣಾ ನೀತಿ ಸಂಹಿತೆ ಜಾರಿಯಾಗಿರುವ ವೇಳೆ ಇಷ್ಟು ದೊಡ್ಡ ಮೊತ್ತದ ಹಣವನ್ನು ಸೂಕ್ತ ದಾಖಲೆಗಳಿಲ್ಲದೇ ಸಾಗಿಸುತ್ತಿರುವುದು ಅನುಮಾನಕ್ಕೆ ಆಸ್ಪದ ನೀಡುವಂತಹ ಘಟನೆಯಾಗಿದೆ ಎಂಬುದು ಬ್ರೂಸ್‌ಪೇಟೆ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಬೋಪಯ್ಯ ಅವರ ಅಭಿಮತ.

ಅಶೋಕ್ ಕುಮಾರ್ (41) ನಗರದ ಹೂವಿನಬಜಾರ್ ನಿವಾಸಿಯಾಗಿದ್ದು, ಗಿರವಿ ವ್ಯವಹಾರ ನಡೆಸುತ್ತಿದ್ದ ಕೌಲ್ ಬಜಾರ್ ನಿವಾಸಿ ಶ್ರೀಗೋಪಾಲ್ ಎಂಬುವವರ ಬಳಿ ಕೆಲಸ ಮಾಡುತ್ತಿದ್ದ ಎಂದು ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ. ಸೂಕ್ತ ದಾಖಲೆ, ರಸೀದಿಗಳಿಲ್ಲದೇ ಸಾಗಿಸುತ್ತಿದ್ದ ಹಣವನ್ನು ಡಿಸಿಐಬಿ ಇನ್ಸ್‌ಪೆಕ್ಟರ್ ಉಮೇಶ್ ಈಶ್ವರ ನಾಯಕ್ ಮತ್ತವರ ತಂಡ ಕಾರ್ಯಾಚರಣೆ ನಡೆಸಿತ್ತು .